


■ ಸವಿತಾ ಶ್ರೀನಿವಾಸ
ಕಲೆ: ಮೋನಪ್ಪ ಎಚ್.ಎಸ್.






# ನೆಲ ಕುಸಿಯೆ ಚಕ್ರವ್ಯೂಹ

ಹನ್ನಾ ತನ್ನ ಕಚೇರಿಯಲ್ಲಿನ ಪಾಳಿ ಕೆಲಸ ಮುಗಿಸಿ ರಾತ್ರಿ ಒಂಬತ್ತು ಗಂಟೆಗೆ ಮನೆಗೆ ಹೊರಡಬೇಕೆನ್ನುವಷ್ಟರಲ್ಲಿ ಅವಳ ಬಾಸ್‌ನಿಂದ ಸಂದೇಶವೊಂದು ಅವಳ ಡ್ಯೂಟಿ ಚಾರ್ಟ್‌ಗೆ ರವಾನೆಯಾಗಿತ್ತು. ಆರ್ಥಿಕ ವರ್ಷದ ಕೊನೆಯಾಗಿದ್ದರಿಂದ ಹಲವಾರು ಕೆಲಸಗಳು ಬಾಕಿ ಇದ್ದು, ನಾಳೆ ಎಂದಿನ ಮಧ್ಯಾಹ್ನದ ಶಿಫ್ಟ್‌ಗಿಂತ ಮುಂಚಿತವಾಗಿಯೇ ಕಚೇರಿಗೆ ಬಂದು ಕೆಲಸ ಮಾಡಲು ತಿಳಿಸಿದ್ದರು. ಬಾಸ್ ಸಂದೇಶಕ್ಕೆ ಆಯ್ತೆಂದು ತಿಳಿಸದೆ ಬೇರೆ ದಾರಿ ಇರಲಿಲ್ಲ.

ಮನೆಗೆ ಹೊರಡಲು ಕಾರಿನಲ್ಲಿ ಕುಳಿತೊಡನೆಯೇ ರೂಟ್ ಮ್ಯಾಪ್ ಉಳ್ಳ ದೃಶ್ಯ ಮುಂದಿನ ಸೀಟಿನ ಸ್ಟೀರಿಂಗ್ ಪಕ್ಕದ ಮಾನಿಟರ್‌ನಲ್ಲಿ ಮೂಡಿತ್ತು. ಜೊತೆಗೆ ತನ್ನ ಕಾರಿನ ಬ್ಯಾಟರಿಯನ್ನು ರೀಚಾರ್ಜ್ ಮಾಡುವ ಅವಶ್ಯಕತೆ ಇದೆ ಎಂದೂ ಸಹ ಕೆಂಪು ನಿಶಾನೆ ತೋರಿಸುತ್ತಿತ್ತು. ನಿರ್ದಿಷ್ಟ ಬಂಕ್‌ನಿಂದ ರಿಮೋಟ್ ವ್ಯವಸ್ಥೆಯಡಿ ಬ್ಯಾಟರಿ ರಿಚಾರ್ಜ್ ಮಾಡಿಸಿದಾಗ ಅದರ ವೆಚ್ಚ ಇಬ್ಬನಿಯ ಪೇಮೆಂಟ್ ಖಾತೆಯಿಂದ ಕಟಾವಾಗಿತ್ತು.